ನ್ಯಾಷನಲ್ ಪಾಲಿಸಿ ಮಾಡಬೇಕು. ಈ ಫಾರೆಸ್ಟ್ ಎನ್ನುವುದು ಅಲ್ಲಿಯೂ ಹೋಗುವ ಹಾಗಿಲ್ಲ. ಎಲ್ಲಿಯೂ ಹೋಗುವ ಹಾಗಿಲ್ಲ. They have now realised the difficulty and they are going to find some kind of a solution at the national level.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, 27ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 85 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ತೀರ್ಥಹಳ್ಳಿ ತಾಲ್ಲೂಕಿನ ನಾಗರೀಕರೊಬ್ಬರ ಅಕ್ರಮಬಂಧನ

2051 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿನ ಮಳೂರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಒಬ್ಬರು ನಾಗರೀಕರೋಬ್ಬರ ಮೇಲೆ ಹಲ್ಲೆ ನಡೆಸಿ ಅಕ್ರಮ ಬಂಧನದಲ್ಲಿರಿಸಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಿಸಿದ ಮೊಕದ್ದಮೆಯ ತನಿಖೆಯು ಯಾವ ಹಂತದಲ್ಲಿದೆ?

ಆ) ಆ ಸಬ್‌ಇನ್ಸ್‌ಪೆಕ್ಟರ್‌ರವರ ಮೇಲೆ ಇಲಾಖಾ ಕ್ರಮ ಏನು ಕೈಗೊಳ್ಳಲಾಗಿದೆ?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ದಿನಾಂಕ : 23.4.97 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ತೂದೂರು ಗ್ರಾಮದ ವಾಸಿ ಸತೀಶ್ ಕೂಮಾರ್ ಬಿನ್‌ತಿಮ್ಮನಾಯ್ಕ ಇವರ ಮನೆಗೆ ಮಳೂರು ಪೋಲೀಸ್ ಠಾಣೆಯ ಪಿಎಸ್‌ಐ ಆರ್. ನಾಗಣ್ಣಾ ಹಾಗೂ ಸಿಬ್ಬಂದಿಗಳಾದ ಶಾಂತಮಲ್ಲಪ್ಪ, ತಿಪ್ಪೇಸ್ವಾಮಿ ಮತ್ತು ಇನ್ನೊಬ್ಬರು ಹೋಗಿ ಮನೆಯಲ್ಲಿ ಮಲಗಿದ್ದ ಸತೀಶ್‌ಕುಮಾರ್ ರವರನ್ನು ಎಬ್ಬಿಸಿ, ಹೊರಗೆ ಕರೆದು ಅನಧಿಕೃತವಾಗಿ ವಾಟೆ ಹುಳಿ ದಾಸ್ತಾನು ಮಾಡಿದ ಬಗ್ಗೆ ವಿಚಾರಿಸಿ, ಅದನ್ನು ಪೋಲೀಸ್ ಠಾಣೆಗೆ ತಂದು ಕೊಡುವಂತೆ ಹೇಳಿ ಅವ್ಯಾಚ ಶಬ್ಧಗಳಿಂದ ಬೈದು, ದೊಣ್ಣೆಯಿಂದ ಹೊಡೆದಿದ್ದು ಅಲ್ಲದೇ ಸತೀಶ್ ಕುಮಾರ್‌ರವರನ್ನು ಹುಳಿ ಸಮೇತ ಠಾಣೆಗೆ ಕರೆದುಕೊಂಡು ಬಂದು, ಅವರಿಂದ ರೂ 1300.00 ಪಡೆದಿರುತ್ತಾರೆಂದು, ಸತೀಶ್‌ಕುಮಾರ್ ರವರು ನೀಡಿದ ದೂರಿನ ಮೇರೆಗೆ ಮಳೂರು ಪೋಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ : 27 : 97 ಕಲಂ 324, 504, 161 ಜೊತೆಗೆ 34 ಭಾ.ದಂ.ಸಂ. ರೀತ್ಯಾ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ. ಸದರಿ ಪ್ರಕರಣದ ತನಿಖೆಯನ್ನು ಸಿಪಿಐ ತೀರ್ಥಹಳ್ಳಿರವರು ಕೈಗೊಂಡಿದ್ದು, ಸದರಿ ಪ್ರಕರಣದ ಎಲ್ಲಾ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿದ್ದು, ತನಿಖೆಯು ಪೂರ್ಣಗೊಂಡಿದ್ದು, ಪ್ರಕರಣದಲ್ಲಿನ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಬಗ್ಗೆ ಸಹಾಯಕ ಅಭಿಯೋಜಕ ನಿರ್ದೇಶಕರು,